ಬಗ್ಗೆ ನಡೆದುಕೊಂಡಿದ್ದ ರೀತಿ ಬಹಳ ಖಂಡನೀಯವಾದುದು. ರಾಜ್ಯಸರ್ಕಾರದ ನೌಕರರ ಅಧ್ಯಕ್ಷರನ್ನು ಮಾನ್ಯಮುಖ್ಯಮಂತ್ರಿಗಳು ಮಾತುಕತೆಗೆ ಕರೆಯಬೇಕಾಗಿತ್ತು. ಆದರೆ ಆ ಕೆಲಸವನ್ನು ಮಾಡಲಿಲ್ಲ. ಆದ್ದರಿಂದ ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ನನಗೆ ಉತ್ತರ ಹೇಳಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.--ಮಾನ್ಯ ಅಧ್ಯಕ್ಷರೇ, ಮಾನ್ಯ ವಿರೋಧಪಕ್ಷದ ನಾಯಕರು ಮಾತನಾಡುತ್ತಾ ಸರ್ಕಾರೀ ನೌಕರರ ಬಗ್ಗೆ ಮಾನ್ಯಮುಖ್ಯಮಂತ್ರಿಗಳು ನಡೆದುಕೊಂಡಿರುವ ವರ್ತನೆ ಬಹಳ ಖಂಡನೀಯವಾದುದು ಎಂದು ಹೇಳಿದರು. ಆದರೆ ನಾನು ಮಾನ್ಯ ವಿರೋಧಪಕ್ಷದ ನಾಯಕರಿಗೆ ಒಂದು ಮಾತನ್ನು ಹೇಳುವುದಾದರೆ, ನಾವು ಯಾವಾಗಲೂ ಕೂಡ ರಾಜ್ಯ ಸರ್ಕಾರೀ ನೌಕರರ ಬಗ್ಗೆ ನಿರ್ಲಕ್ಷ್ಯ ಮನೋಭಾವನೆಯನ್ನು ತಾಳಿಲ್ಲ ಸರ್ಕಾರೀ ನೌಕರರ ಬೇಡಿಕೆಗಳ ಬಗ್ಗೆ ಚರ್ಚೆ ಮಾಡಿ ಅವರ ಬೇಡಿಕೆಗಳನ್ನು ತೀರ್ಮಾನ ಮಾಡಿಕೊಡುವುದಕ್ಕೆ ಸರ್ಕಾರ ಸದಾ ಸಿದ್ಧವಾಗಿದೆ ಆದರೆ ಸರ್ಕಾರೀ ನೌಕರರ ಸಂಘದ ಅಧ್ಯಕ್ಷರು ಹೋದಾಗ ಮಾನ್ಯಮುಖ್ಯಮಂತ್ರಿಗಳು ಸಿಗಲಿಲ್ಲವೆಂದು ಹೇಳಿದ್ದಾರೆ. ಆದರೆ ಆ ದಿನವು ಮಾನ್ಯ ಮುಖ್ಯಮಂತ್ರಿಗಳಿಗೆ ಮೈಯಲ್ಲಿ ಹುಷಾರಿಲ್ಲವೆಂದು ಕಾಣುತ್ತದೆ. ಆದರೆ ಮಧ್ಯಾಹ್ನ ಮಾನ್ಯಮುಖ್ಯಮಂತ್ರಿಗಳು ಬಂದಾಗ ತಾವು ಅವರನ್ನೇ ನೇರವಾಗಿ ಆ ಪ್ರಶ್ನೆಯನ್ನು ಕೇಳಬಹುದು.

ಶ್ರೀ ಎಸ್. ಬಂಗಾರಪ್ಪ.-- ಸ್ವಾಮಿ, ನಾನು ಒಂದು 334ರ ನೋಟೀಸ್ ಕಳುಹಿಸಿ ಕೊಟ್ಟಿದೆ.

ಅಧ್ಯಕ್ಷರು --ನಾನು ಆಗಲೇ ನಿಮ್ಮನ್ನು ಕರೆದೆ ಆಗ ನೀವು ಇರಲಿಲ್ಲ.

ಶ್ರೀ ಪಿ. ರಾಂದೇವ್.--ಮಾನ್ಯ ಅಧ್ಯಕ್ಷರೇ ನಾನು ಕೂಡ ಒಂದು 334 ಪ್ರಕಾರ ನೋಟೀಸ್ ಕೊಟ್ಟು ಕಳುಹಿಸಿದ್ದೆ.

ಅಧ್ಯಕ್ಷರು.--ನಿಮ್ಮನ್ನು ಸಹ ನಾನು ಆಗಲೇ ಕರೆದೆ. ನೀವು ಸಭೆಯಲ್ಲಿ ಇರಲಿಲ್ಲ.

ಶ್ರೀ ಎಸ್. ಬಂಗಾರಪ್ಪ.--ಸ್ವಾಮಿ ಕರೆದ ತಕ್ಷಣ ನಾನು ಹೊರಗಡೆಯಿಂದ ಒಳಗಡೆ ಬಂದೆ.

MR. SPEAKER.--I cannot go back only to accommodate the Hon'ble Members. If I go back, I have to take up all other 334 notices. I have called you and you were not there I am not responsible for tnat.

ಶ್ರೀ ಎಂ ಎಂ. ನಾಣಯ್ಯ.--ಮಾನ್ಯ ಅಧ್ಯಕ್ಷರೇ, ನಾನು ಒಂದು 334ರ ಪ್ರಕಾರ ನೋಟೀಸ್ ಕಳುಹಿಸಿಕೊಟ್ಟಿದ್ದೆ.

MR. SPEAKER.--Two times you have already raised, If I go back, I have to go back for so many 334 notices.

ಶ್ರೀ ಪಿ ರಾಂದೇವ್.--ಮಾನ್ಯ ಅಧ್ಯಕ್ಷರೇ, ಕೇವಲ ಎರಡೆರಡು ನಿಮಿಷಗಳ ಕಾಲ ಅವಕಾಶ ಮಾಡಿಕೊಟ್ಟರೆ ಒಳ್ಳೆಯದು.

(v) ನಗರದ ಚಾಮರಾಜ ಪೇಟೆಯಲ್ಲಿರುವ ಕೆನರಾ ಬ್ಯಾಂಕ್‌ನಲ್ಲಿ ದರೋಡೆಯಾದ ಬಗ್ಗೆ

ಶ್ರೀ ಪಿ ರಾಂದೇವ್.--ಮಾನ್ಯ ಅಧ್ಯಕ್ಷರೇ, ಈ ಮೂಲಕ ನಾನು ಸರ್ಕಾರದ ಗಮನಕ್ಕೆ ತರಬಯಸುವುದೇನೆಂದರೆ, ಮೊನ್ನೆಯದಿನ ಬೆಂಗಳೂರು ನಗರದಲ್ಲಿ ಕೆನರಾ ಬ್ಯಾಂಕಿನಲ್ಲಿ ದರೋಡೆ ನಡೆದಿದೆ. ಇದರ ಬಗ್ಗೆ ನಾನು ಸರ್ಕಾರದ ಗಮನವನ್ನು ಸೆಳೆಯುವುದಕ್ಕೆ ಪ್ರಯತ್ನ ಮಾಡುತ್ತೇನೆ. ಮತ್ತು ಆ ದಿನವು ಕೆನರಾ ಬ್ಯಾಂಕಿನಿಂದ ಸುಮಾರು ಒಂದು ಲಕ್ಷ ರೂಪಾಯಿಗಳನ್ನು ದರೋಡೆ ಮಾಡಿಕೊಂಡು ಹೋಗುತ್ತಿದ್ದಾಗ ಸಿಕ್ಕಿಬಿದ್ದಿದ್ದಾರೆ ಇದೇ ರೀತಿ ಬೆಂಗಳೂರು ನಗರದಲ್ಲಿ ಸುಮಾರು ಎರಡು ಮೂರು ಸಾರಿ ನಡೆದಿದೆ. ಆದರೆ ಇದುವರೆಗೂ ಯಾರು ಆ ದರೋಡೆಯನ್ನು ಮಾಡಿದ್ದಾರೆ ಎಂದು ಪೋಲೀಸಿನವರು ಪತ್ತೆ ಮಾಡಲಿಲ್ಲ. ಈ ಮಾತನ್ನು ನಾನು ಬಹಳ ವಿಷಾದದಿಂದ ಹೇಳಬೇಕಾಗಿದೆ. ಸ್ವಾಮಿ, ಸಾಮಾನ್ಯವಾಗಿ ಈ ದರೋಡೆಯನ್ನು ಸೇಲಂನಿಂದ ಬಂದಿರತಕ್ಕಂಥವರು ಮಾಡುತ್ತಿದ್ದಾರೆಂದು ನನಗೆ ವರ್ತಮಾನ ಬಂದಿದೆ. ಈ ವಿಷಯ ಪೋಲೀಸಿನವರಿಗೆ ಗೊತ್ತಿದ್ದರೂ ಕೂಡ ಅವರು ಅವರ ಮೇಲೆ ಯಾವುದೇ ಒಂದು ಕ್ರಮವನ್ನು ತೆಗೆದುಕೊಳ್ಳದೆ ಸುಮ್ಮನಿದ್ದಾರೆ. ಇದರಿಂದ ಪೋಲೀಸಿನವರು ಕೂಡ ಇದರಲ್ಲಿ ಶಾಮಿಲಾಗಿರಬಹುದೆಂದು ನನಗನ್ನಿಸುತ್ತದೆ. ಆದ್ದರಿಂದ ಇದರ ಬಗ್ಗೆ ಸರ್ಕಾರದವರು ತೀವ್ರವಾಗಿ ಕಾರ್ಯಕ್ರಮ ಹಾಕಿಕೊಂಡು ದರೋಡೆಕಾರರು ಯಾರೆಂದು ಪತ್ತೆ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.--ಸ್ವಾಮಿ, ತಾವು ವಿಷಯವನ್ನು ಪೂರ್ತಿಯಾಗಿ ಮಾತನಾಡಿ ಭಾಷಣ ಮಾಡಿದರೆ ಹೇಗೆ ?

ಶ್ರೀ ಪಿ ರಾಂದೇವ್.---ದರೋಡೆಕೋರರನ್ನು ಈ ಕೂಡಲೇ ಸರ್ಕಾರದವರು ಪತ್ತೆ ಮಾಡಿ ಅವರ ಮೇಲೆ ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳಬೇಕೆಂದು ಸಹ ಸಲಹೆ ಮಾಡುತ್ತಾ ಇದರ ಬಗ್ಗೆ ಸರ್ಕಾರದಿಂದ ನಾನು ಉತ್ತರ ಕೇಳಬಯಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.--(ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಮಂತ್ರಿಗಳು).

ದಿನಾಂಕ 22-1-1994 ರಂದು ಸುಮಾರು ಬೆಳಿಗ್ಗೆ 11ಘಂಟೆಗೆ ಇಬ್ಬರು ಅಪರಿಚಿತ ವ್ಯಕ್ತಿಗಳು ಚಾಮರಾಜಪೇಟೆಯಲ್ಲಿರುವ ಕೆನರಾ ಬ್ಯಾಂಕಿನ ಒಂದನೇ ಮಹಡಿಯಲ್ಲಿ ಶ್ರೀ ಪಾಲೇಕರ್ ಎನ್ನುವ ಕ್ಯಾಷಿಯರ ಜೊತೆಗೆ ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿಯ ಬಿಲ್ಲುಗಳನ್ನು ಪಾವತಿ ಮಾಡುವ ಬಗ್ಗೆ ಚರ್ಚೆಯಲ್ಲಿ ತೊಡಗಿದರು, ಕ್ಯಾಷಿಯರರವತು ವಿದ್ಯುಚ್ಛಕ್ತಿ ಬಿಲ್ಲಿನ ಮೂರು ಪ್ರತಿಗಳನ್ನು ಕೊಡಬೇಕೆಂದು ಕೇಳಿದರು ಮತ್ತು ಈ ಇಬ್ಬರು ಅಪರಿಚಿತರು ಉದ್ದೇಶಪೂರ್ವಕವಾಗಿ ಕೇವಲ ಎರಡು ಪ್ರತಿಗಳನ್ನು ತೆಗೆದುಕೊಂಡು ಬಂದು ಹಣವನ್ನು ಪಾವತಿ ಮಾಡಿಸಿಕೊಳ್ಳಲು ಒತ್ತಾಯಿಸುತ್ತಿದ್ದರು ಆದರೆ ಅದೇ ಸಮಯಕ್ಕೆ ಸುರೇಶ್ ರಾವ್ ಎನ್ನುವ ಬ್ಯಾಂಕ್ ಅಧಿಕಾರಿಗಳು ಕ್ಯಾಷಿಯರ್ ಅವರ ಸ್ಥಳಕ್ಕೆ ನೂರು ರೂಪಾಯಿಗಳ ನೋಟುಗಳನ್ನೊಳಗೊಂಡು ಒಂದು ಲಕ್ಷ ರೂಪಾಯಿಗಳನ್ನು ಸಂದಾಯಿಸಲು ಬಂದರು. ಕ್ಯಾಷಿಯರರವರು ನೂರು ರೂಪಾಯಿ ನೋಟುಗಳ ಕಂತೆಯನ್ನು ತೆಗೆದುಕೊಂಡು ಕ್ಯಾಷ್ ಬಾಕ್ಸ್‌ನಲ್ಲಿ ಇಟ್ಟರು. ಆದರೆ ಅದನ್ನು ಪುಟ್ಟಿರಲಿಲ್ಲ ಅದೇ ಸಮಯಕ್ಕೆ ಇನೊಬ್ಬ ಅಪರಿಚಿತ ವ್ಯಕ್ತಿ ಸುರೇರ್‌ರಾವ್ ಅವರ ಬೆನ್ನು ಹಿಂದೆ ಕ್ಯಾಷಿಯರ್ ಇದ್ದ ಸ್ಥಳಕ್ಕೆ ಬಂದುದಾಗಿ ಮತ್ತು ಶ್ರೀ ಪಾಲೇಕರ್ ಮತ್ತು ಸುರೇಶ್‌ರಾವ್ ಅವರು ಮೇಲೆ ಹೇಳಿದ ಇಬ್ಬರು ಅಪರಿಚಿತರೊಂದಿಗೆ ಚರ್ಚೆಯಲ್ಲಿ ತೊಡಗಿದ್ದಾಗ ಈ ಒಂದು ಲಕ್ಷ ರೂಪಾಯಿಯ ನೋಟಿನ ಕಂತೆಯನ್ನು ಮೆತ್ತಗೆ ತೆಗೆದುಕೊಂಡು ಆ ಸ್ಥಳದಿಂದ ಹೊರಟರು. ಇದನ್ನು ಕಂಡ ಶ್ರೀ ಜಾನ್ ಮ್ಯಾಥ್ಯೂ ಎಂಬ ಬ್ಯಾಂಕಿನೊಂದಿಗೆ ವ್ಯವಹಾರ ಮಾಡುವ ಒಬ್ಬ ವ್ಯಕ್ತಿ ಬ್ಯಾಂಕಿನ ಸಿಬ್ಬಂಧಿ ಮತ್ತು ಕ್ಯಾಷಿಯರ್ ಅವರಿಗೆ ಎಚ್ಚರಿಸಿದರು ಅಷ್ಟರಲ್ಲಿ ಆ ವ್ಯಕ್ತಿ ಆ ನೋಟಿನ ಕಂತೆಗಳನ್ನು ಒಂದು ಚೀಲದಲ್ಲಿ ಹಾಕಿಕೊಂಡು ತೀವ್ರಗತಿಯಿಂದ ಮಹಡಿಯ ಮೆಟ್ಟಿಲುಗಳನ್ನು ಇಳಿದು ಪರಾರಿಯಾಗಲು ಓಡಲು ಪ್ರಯತ್ನಿಸಿದ. ಬ್ಯಾಂಕಿನ ಸಿಬಂಧಿಯವರು ಇದನ್ನು ಕಂಡು ಬ್ಯಾಂಕಿನ ಅಟೆಂಡರ್ ಕಮಲಾಕಲ್ ಕೆಳ ಮಹಡಿಯಲ್ಲಿದ್ದ ಇತರರಿಗೆ ಎಚ್ಚರಿಸಿದ್ದರು ಆ ಮೇರೆಗೆ ಶ್ರೀ ಕಮಲಾಕಲ್ ಮತ್ತು ಬ್ಯಾಂಕಿನ ಮೂವರು ಗುನುಸ್ತರು ತ್ರೀ ರಘುನಾಯಕ್ ಸೂರ್ಯಪ್ರಕಾಶ್ ಪ್ರಮೋದ್ ಕುಮಾರ್ ಇವರು ಆತನನ್ನು ಬೆನ್ನಟ್ಟಿ ತಪ್ಪಿಸಿಕೊಂಡು ಹೋಗುತ್ತಿರುವ ಆಪರಾಧಿಯನ್ನು ಬ್ಯಾಂಕಿನಿಂದ ಸುಮಾರು 100 ಗಜ ದೂರದಲ್ಲಿ ತರಗುಪೇಟೆ ಬಳಿ ಹಿಡಿದರು. ಅವನಿಂದ ಒಂದು ಲಕ್ಷ ರೂಪಾಯಿ ಪೂರ್ಣ ಹಣವನ್ನು ವಶಪಡಿಸಿಕೊಳ್ಳಲಾಯಿತ್ತು. ತಪ್ಪಿತಸ್ಥನನ್ನು ಹೊಸ ತರಗುಪೇಟೆ ಪೋಲಿಸ್ ಠಾಣೆಗೆ ಒಪ್ಪಿಸಲಾಗಿ, ಪೋಲಿಸ್ ಸೀನಿಯಲ್ ಮ್ಯಾನೇಜರ್ ಅವರ ದೂರಿನ ಮೇಲೆ ಗುನ್ನೆ ನಂ. 29/84 ಅಂಡರ್ ಸೆಕ್ಷನ್ 380 ಐ.ಪಿ.ಸಿ ಇದನ್ನು 12 45ಕ್ಕೆ ನೊಂದಾಯಿಸಿ ಕೊಂಡರು ತಪ್ಪಿತಸ್ಥ ಆರ್. ಲೋಗನಾಥನ್ ತಂದೆ ರಂಗಸ್ವಾಮಿ (ವಯಸ್ಸು 22) ತಮಿಳನಾಡಿನ ಸೇಲಂವಾಸಿಯೆಂದು ಗುರುತಿಸಲಾಗಿದೆ. ಆತನನ್ನು ಪ್ರಶ್ನಿಸಲಾಗಿ ತನ್ನ ಸಹಚರರುಗಳ ಹೆಸರನ್ನು ಅಮರೇಶ್ ಮತು ಅಶೋಕ್ ಕುಮಾರ್ ಎಂದು ಅವರು ಇಬ್ಬರೂ ಸೇಲಂನವರೆಂದೂ ತಿಳಿಸಿದ್ದಾನೆ. ಈ ವಿಷಯ ತಿಳಿದ ಕೂಡಲೇ ನಾಪತ್ತೆಯಾದ ಈ ಇಬ್ಬರನ್ನು ದಸ್ತಗಿರಿ ಮಾಡಲು ಬೆಂಗಳೂರು ನಗರದ ಎಲ್ಲಾ ಪೋಲೀಸ್ ಠಾಣೆಗಳಿಗೂ ಎಚ್ಚರಿಕೆಯನ್ನು ಕೊಡಲಾಗಿದೆ. ತೀವ್ರಗತಿಯಿಂದ ತಪಾಸಣೆ ನಡೆದಿದೆ.

ಈ ಇಬ್ಬರನ್ನು ದಸ್ತಗಿರಿ ಮಾಡಲು ಅಧಿಕಾರಿಗಳ ವಿಶೇಷ ತಂಡವನ್ನು ರಚಿಸಲಾಗಿದ್ದು, ಮತ್ತು ಸೇಲಂಗೆ ವಿಶೇಷ ಮಾಹಿತಿಯನ್ನು ಸಂಗ್ರಹಿಸಲು ಅಧಿಕಾರಿಗಳ ತಂಡವನ್ನು ಕಳುಹಿಸಲಾಗಿದೆ.

ಪೋಲೀಸ್ ಕಮಿಷನರ್ ಅವರು ಶ್ರೀ ಕಮಲಾಕರ್ ಮತ್ತು ರಘುನಾಯಕ್‌ರವರಿಗೆ ತಲಾ ಐದು ನೂರು ರೂಪಾಯಿ ಮತ್ತು ಸೂರ್ಯಪ್ರಕಾಶ್ ಮತ್ತು ಪ್ರಮೋದ್ ಕುಮಾರ್, ಜಾನ್ ಮ್ಯಾಥ್ಯೂ ಇವರಿಗೆ ತಲಾ ಮುನ್ನೂರು ರೂಪಾಯಿಗಳ ನಗದು ಬಹುಮಾನ ನೀಡಿದ್ದಾರೆ.

ಬೆಂಗಳೂರು ನಗರದಲ್ಲಿ ಹಿಂದಿನ ಐದು ವರ್ಷಗಳಲ್ಲಿ ಬ್ಯಾಂಕ್ ಡಕಾಯಿತಿ ಪ್ರಕರಣ ಯಾವುದು ವರದಿಯಾಗಿಲ್ಲ.

15-6-81 ರಂದು ಸದಾಶಿವನಗರದ ಕೆನರಾ ಬ್ಯಾಂಕ್ ಶಾಖೆಯಿಂದ ಬ್ಯಾಂಕ್ ಹರೋಡೆ ಠಾಬರಿ ಯಲ್ಲಿ ಒಬ್ಬ ಅನುಭವಿ ಯುವಕನಿಂದ ನಡೆದಿತ್ತು. ಅಮೇರಿಕಾದಲ್ಲಿ ದೂರದರ್ಶನ ಚಿತ್ರಗಳಿಂದ ಪ್ರೇರೇಪಿತನಾದ

ಈತ (ಸಂದೀಪ್ ಅವನ ಹೆಸರು) ಬ್ಯಾಂಕಿಗೆ ನುಗ್ಗಿ ಕ್ಯಾಷಿಯರ್‌ನನ್ನು ಬಂಧೂಕಿನಿಂದ ಬೆದರಿಸಿ 44,637 ರೂಪಾಯಿಗಳನ್ನು ತೆಗೆದುಕೊಂಡು ಕಾರಿನಲ್ಲಿ ಓಡಿ ಹೋದನು. ಅವನನ್ನು ಹಿಂಬಾಲಿಸಿದ ಪೊಲೀಸರು ಅವನನ್ನು ನೆಲಮಂಗಲದ ಬಳಿ ಹಿಡಿದರು. ಅವನಿಂದ 42,062 ರೂಪಾಯಿಗಳನ್ನು ವಶ ಪಡಿಸಿಕೊಳ್ಳಲಾಯಿತು. ಮೊಕದ್ದಮೆ ಮುಂದುವರಿಯುತ್ತಿದೆ.

ಬ್ಯಾಂಕಿನ ಅಧಿಕಾರಿಗಳ ಹಾಗೂ ಅಲ್ಲಿಗೆ ಬಂದ ಸಾರ್ವಜನಿಕರ ಗಮನವನ್ನು ಬೇರತ್ತ ಸೆಳೆದು ಬ್ಯಾಂಕಿನಿಂದ ಕಳ್ಳತನ ಮಾಡಿದ ಕೆಲವು ಪ್ರಕರಣಗಳು ಬೆಳಕಿಗೆ ಬಂದಿವೆ. ಬ್ಯಾಂಕಿಗೆ ಕನ್ನ ಹಾಕಿದ ಐದು ಪ್ರಕರಣಗಳು ಬೆಂಗಳೂರಿನಲ್ಲಿ 1983 ರಲ್ಲಿ ವರದಿಯಾಗಿದೆ. ಈ ಐದು ಪ್ರಕರಣಗಳಲ್ಲಿ 3 ಕೇಸುಗಳನ್ನು ಪತ್ತೆ ಹಚ್ಚಲಾಯಿತು. ಒಂದು ಪ್ರಕರಣ ಸುಳ್ಳೆಂದು ಕಂಡು ಬಂತು. ಇನ್ನೊಂದು ಪ್ರಕರಣದಲ್ಲಿ ಇನ್ನೂ ತನಿಖೆ ನಡೆಯುತ್ತಿದೆ.

(ವಿ. ಸೂ.—ಐದು ಜನಕ್ಕಿಂತಲೂ ಕಡಿಮೆ ಜನರು ಒಟ್ಟುಗೂಡಿ ಬಲಪ್ರಯೋಗ ಮಾಡಿ ಕಳ್ಳತನ ಮಾಡಿದರೆ ಅದು ರಾಬರಿ ಎಂತಲೂ, ಐದು ಅಥವಾ ಐದಕ್ಕಿಂತಲೂ ಹೆಚ್ಚು ಜನರು ಬಲಪ್ರಯೋಗ ಮಾಡಿ ಕಳ್ಳತನ ಮಾಡಿದರೆ ಅದು 'ಡಕಾಯಿತಿ' ಎಂತಲೂ ಪರಿಗಣಿಸಲ್ಪಡುತ್ತದೆ.)

(vi) ಬೆಂಗಳೂರು ದಕ್ಷಿಣ ತಾಲ್ಲೂಕಿನ ಬಿಳೇಕಹಳ್ಳಿಯಲ್ಲಿ ನಿವೇಶನಗಳ ಹಂಚಿಕೆ ಬಗ್ಗೆ

ಶ್ರೀ ಎಸ್. ಬಂಗಾರಪ್ಪ (ಸೊರಬ).—ಮಾನ್ಯ ಅಧ್ಯಕ್ಷರೆ, ಬೆಂಗಳೂರು ದಕ್ಷಿಣ ತಾಲ್ಲೂಕು ಬಿಳೇಕಹಳ್ಳಿ ಗ್ರಾಮದಲ್ಲಿ ಸರ್ವೆ ನಂಬರ್ 8ನೇ 2 ಮತ್ತು ಮೂರು, ಸರ್ವೆ ನಂಬರ್ 9ನೇ ಒಂದು, ಎರಡು ಮತ್ತು ಮೂರು, ಸರ್ವೆ ನಂಬರ್ 185 ರಲ್ಲಿ ಒಟ್ಟು 7 ಎಕರೆ 29 ಗುಂಟೆ ಜಮೀನಿನಲ್ಲಿ ನೂರಾರು ಜನ ಹರಿಜನ ಗಿರಿಜನರು ಅನೇಕ ವರ್ಷಗಳಿಂದ ಮನೆಗಳನ್ನು ಕಟ್ಟಿಕೊಂಡು ವಾಸವಾಗಿದ್ದಾರೆ. ನಮಗೆ ನಿವೇಶನ ಕೊಡಬೇಕೆಂದು ಸರ್ಕಾರದ ಮೇಲೆ ಅವರು ಒತ್ತಡ ತಂದರು ಆಗ ಕೆಲವರಿಗೆ ನಿವೇಶನಗಳನ್ನು ಮಂಜೂರು ಮಾಡಿದರು. ನಿವೇಶನಗಳನ್ನು ಮಂಜೂರು ಮಾಡಿದಂತಹ ಸಮಯದಲ್ಲಿ ಬೆಂಗಳೂರು ನಗರದಲ್ಲಿ ವಾಸವಾಗಿರತಕ್ಕ ಜನರಿಗೆ ಮಾತ್ರ ನಿವೇಶನಗಳನ್ನು ಕೊಟ್ಟರು. ಇದನ್ನು ಸ್ಥಳೀಯ ಜನರು ವಿರೋಧ ಮಾಡಿದರು. ಇದು ಮಾನ್ಯ ಮಂತ್ರಿಗಳಿಗೂ ಗೊತ್ತಿದೆಯೆಂದು ಹೇಳುತ್ತಿದ್ದಾರೆ. ಬೆಂಗಳೂರು ನಗರದಲ್ಲಿ ವಾಸವಾಗಿರತಕ್ಕ ಜನರಿಗೆ ನಿವೇಶನಗಳನ್ನು ಕೊಟ್ಟರೆ ನಾವೇನು ಮಾಡಬೇಕೆಂದು ಸ್ಥಳೀಯ ಜನರು ಇದನ್ನು ವಿರೋಧಮಾಡಿದ್ದಾರೆ ಕೆಲವರು ಇದು ನಮ್ಮ ಸ್ವಂತ ಜಾಗವೆಂದು ಹೇಳಿಕೊಂಡು ಹೈಕೋರ್ಟ್‌ನಲ್ಲಿ ರಿಟ್ ಹಾಕಿದರು ಆದರೆ ರಿಟ್ ನಜಾ ಆದಮೇಲೆ ನಿವೇಶನ ಕೇಳಿರತಕ್ಕ ಜನರು ಕಳೆದ 65 ದಿನಸಗಳಿಂದ ಕಬ್ಬನ್‌ಪಾರ್ಕಿನಲ್ಲಿ ಸತ್ಯಾಗ್ರಹ ಮಾಡುತ್ತಿದ್ದಾರೆ. ಇದುವರೆಗೆ ಅವರನ್ನು ಯಾರೂ ಹೋಗಿ ನಿಮ್ಮ ಕಷ್ಟವೇನೆಂದು ಕೇಳಿಲ್ಲ ಹಾಗೂ ಅವರನ್ನು ಯಾರೂ ಮಾತನಾಡಿಸಿಲ್ಲ. ನಾನು ಇದರ ಬಗ್ಗೆ ಬೆಂಗಳೂರು ಜಿಲ್ಲಾಧಿಕಾರಿಗಳವರ ಜೊತೆಯಲ್ಲಿ ಮಾತನಾಡಿದ್ದೇವೆ. ಜಿಲ್ಲಾಧಿಕಾರಿಗಳು ಏನು ಹೇಳಿದರು ಅಂದರೆ ಅವರಿಗೆ ಅನ್ಯಾಯವಾಗಿದೆ ಎಂದೂ ಅವರಿಗೆ ನಿವೇಶಗಳನ್ನು ಕೊಡಬೇಕಾಗಿದೆಯೆಂದೂ ಆದ್ದರಿಂದ ನಿವೇಶನಗಳನ್ನು ಕೊಡಲಿಕ್ಕೋಸ್ಕರ ಸರ್ಕಾರದ ಒಪ್ಪಿಗೆಗಾಗಿ ಕಡತವನ್ನು ಸರ್ಕಾರಕ್ಕೆ ಕಳುಹಿಸಿ ಕೊಟ್ಟಿದ್ದೇವೆಂದು ಹೇಳಿದರು. ಮಾನ್ಯ ಮಂತ್ರಿಗಳು ಆ ಕಡತವನ್ನು ತಕ್ಷಣ ತರಿಸಿಕೊಂಡು ನೋಡಬೇಕು ಸತ್ಯಾಗ್ರಹ ಮಾಡುತ್ತಿರುವವರನ್ನು ಎಬ್ಬಿಸುವಂತಹ ಕೆಲಸವನ್ನು ಮಾಡಿ. ಸ್ಥಳೀಯವಾಗಿರತಕ್ಕವರಿಗೆ ನಿವೇಶನಗಳನ್ನು ಕೊಡುವ ವ್ಯವಸ್ಥೆಯಾಗಬೇಕು. ರಿಟ್ ಹಾಕುವಾಗ ಸಾಮೂಹಿಕವಾಗಿ ರಿಟ್ ಹಾಕಿದ್ದರಿಂದ ಹೈಕೋರ್ಟ್‌ನವರು ಅದನ್ನು ವಜಾಮಾಡಿ ಇಂಡಿವಿಜುಯಲ್ ಆಗಿ ರಿಟ್ ಹಾಕುವಂತೆ ಡಿರೆಕ್ಷನ್ ಕೊಟ್ಟರು ಅವರು ಇಂಡಿವಿಜಿಯಲ್ ಆಗಿ ರಿಟ್ ಹಾಕೆವುದರೊಳಗೆ ನೀವು ನಿವೇಶನಗಳ ಹಕ್ಕುಪತ್ರಗಳನ್ನು ಕೊಟ್ಟಿದ್ದರೆ ಈ ಕಷ್ಟ ಬರುತ್ತಿರಲಿಲ್ಲ. ಅಧಿಕಾರಿಗಳು ನಿವೇಶನ ಹಂಚದಂತೆ ಡಿಲೇ ಮಾಡಿದ್ದೀರಿ. ಈಗ ಅವರು ಹೈಕೋರ್ಟ್‌ನಲ್ಲಿ ಇಂಡಿವಿಜಿಯಲ್ ಆಗಿ ರಿಟ್ ಹಾಕುವುದಕ್ಕೆ ಪ್ರಯತ್ನ ಮಾಡಿದ್ದಾರೆ. This is a big lapse on the part of Department itself. ನೀವು ತಕ್ಷಣ ಫೈಲ್ ತರಿಸಿಕೊಂಡು ನಿವೇಶನಗಳನ್ನು ಬೇಗ ಮಂಜೂರುಮಾಡುವಂತೆ ಜಿಲ್ಲಾಧಿಕಾರಿಗಳಿಗೆ ಆದೇಶ ನೀಡಬೇಕು. ಅವರು ಹೈಕೋರ್ಟ್‌ನಿಂದ ಸ್ಟೇ ತರುವುದರೊಳಗೆ ನೀವು ನಿವೇಶನಗಳನ್ನು ಹಂಚಬೇಕು ಅಲ್ಲಿ ಹೆಚ್ಚಾಗಿ ಹರಿಜನಗಿರಿಜನರು ಮತ್ತು ದುರ್ಬಲ ವರ್ಗದವರು ಇದ್ದಾರೆ. 65 ದಿವಸಗಳಿಂದ ಅವರು ಸತ್ಯಾಗ್ರಹ ಮಾಡುತ್ತಿದ್ದಾರೆ. ಅವರು ಸಂಬಂಧಪಟ್ಟವರಿಗೆ ಶಾಸಕರಿಗೆ ಹಾಗೂ ಮಂತ್ರಿ